ಈ ದಿನ ದಿನಾಂಕಃ07-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಹೆಚ್ ಎನ್ ಜಿ ವಕೀಲರಿಂದಃ**

ಸದರಿ ದಾವೆಯನ್ನು ವಾದಿ ಅವರ ತಮ್ಮನಾದ ಶಿವನಾಯ್ಕರವರ/7 ನೇ ಪ್ರತಿವಾದಿ ಮೇಲೆ ಜಮೀನಿಗಾಗಿ ಹೂಡಿರುತ್ತಾರೆ. ಈ ದಾವೆಯ 1 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೆಯನ್ನು ತಮಗೆ ಬರಬೇಕಾದ ಜಮೀನಿಗಾಗಿ ಹೂಡಿರುತ್ತಾರೆ. ಈ ದಾವೆಗೆ ಸಂಬಂಧಪಟ್ಟ 1994 ರಿಂದ ಹಿಂದಿನ ಹಳೆ ಪಹಣಿಯನ್ನು ನಾನು ನೋಡಿರುತ್ತೇನೆ. ಸದರಿ ಪಹಣಿಯಲ್ಲಿ ಇಬ್ಬರ ಹೆಸರು ಇದ್ದು ಅವರ ಹೆಸರು ನನಗೆ ನೆನಪಿಲ್ಲ. ಸದರಿ ದಾವಾಸ್ತಿಯ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಸೂಳೆಕೆರೆ ಕಾಲುವೆ ಪಶ್ಚಿಮಕ್ಕೆ ಕೃಷ್ಣನಾಯ್ಕರವರ ಹೊಲ, ಉತ್ತರಕ್ಕೆ ವಾದಿ ಪ್ರತಿವಾದಿಗಳಿಗೆ ಸೇರಿದ ಉಳಿದ ಜಮೀನು, ದಕ್ಷಿಣಕ್ಕೆ ನನ್ನ ತಂದೆಯವರ ಜಮೀನು ಇದೆ. ನಾನು ಬಿ ಎ ಪದವೀಧರ. ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸವನ್ನುತ್ಯಾವಣಿಗೆಯಲ್ಲಿ ಮಾಡಿದ್ದು , ಪಿ ಯು ಸಿ ಯನ್ನು ಮಣ್ಣಮ್ಮ ಪದವಿ ಪೂರ್ವ ಕಾಲೇಜು ನಲ್ಲೂರಿನಲ್ಲಿ ಮತ್ತು ದಾವಣಗೆರೆಯಲ್ಲಿ ಮಾಡಿರುತ್ತೇನೆ. ನಾನು ದಾವಣಗೆರೆಯಲ್ಲಿ ವಿಧ್ಯಾಭ್ಯಾಸ ಮಾಡುವಾಗ ನಮ್ಮ ಮನೆಯಿಂದಲೇ ಓಡಾಡುತ್ತಿದ್ದೆ. ಬಿ ಎ ಪದವಿಯನ್ನು ನಾನು ದಾವಣಗೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾಡಿರುತ್ತೇನೆ. ಸದರಿ ವಿದ್ಯಾಭ್ಯಾಸದ ಸಮಯದಲ್ಲಿ ನಾನು ಒಂದು ವರ್ಷ ಹಾಸ್ಟೆಲ್ ನಲ್ಲಿದ್ದು 2 ವರ್ಷ ಮನೆಯಿಂದ ಓಡಾಡಿರುತ್ತೇನೆ. ನನ್ನ ಪದವಿ ವಿದ್ಯಾಭ್ಯಾಸ ಪೂರ್ಣಗೊಂಡಿರುವುದಿಲ್ಲ. ಪದವಿಯ ನಂತರ ನಾನು ಮಂಗಳೂರಿನ ಜೆ ಕೆ ಇಂಡಸ್ಟ್ರೀಸ್ ಎಂಬ ಖಾಸಗಿ ಕಂಪನಿಯಲ್ಲಿ 5 ವರ್ಷ ಕೆಲಸ ಮಾಡಿದ್ದೆ. ನಾನು ಮಂಗಳೂರಿನಿಂದ ನಾನು ನಮ್ಮ ಊರಿಗೆ ತಿಂಗಳಿ 2 ಬಾರಿ ಬರುವುದು ಹೋಗುವುದು ಮಾಡುತ್ತಿದ್ದೆ. ಮಂಗಳೂರಿನಿಂದ ನಮ್ಮ ಊರಿಗೆ 280 ಕಿ ಮೀ ಅಂತರವಿದೆ. ಮಂಗಳೂರಿನಿಂದ ನಾನು ನಮ್ಮ ಊರಿಗೆ 2019 ರಲ್ಲಿ ಬಂದಿರುತ್ತೇನೆ. ನನ್ನ ವಿವಾಹ 2017 ರಲ್ಲಿ ನಮ್ಮ ಊರಿನಲ್ಲಿ ಆಗಿರುತ್ತದೆ. ವಿವಾಹವಾದ 2 ವರ್ಷಗಳವರೆಗೆ ಕುಟುಂಬ ಸಮೇತ ಮಂಗಳೂರಿನಲ್ಲಿ ವಾಸವಾಗಿದೆ. ನಾನು ಮಂಗಳೂರಿನಲ್ಲಿರುವಾಗ ನಮ್ಮ ಊರಿನಲ್ಲಿದ್ದ ನಮ್ಮ ಹೊಲವನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ಹೊಲಮನೆ ನೋಡಿಕೊಳ್ಳುವ ಜೊತೆಗೆ ಸೇವಲಾಲ್ ಮರಿಯಪ್ಪ ದೇವಸ್ಥಾನ ಮತ್ತು ದುರ್ಗಾಂಬಿಕ ದೇವಸ್ಥಾನದ ಪೌರೋಹಿತ್ಯವು ಸಹ ಮಾಡುತ್ತಿದ್ದರು. ಸೇವಲಾಲ್ ಮರಿಯಪ್ಪ ದೇವಸ್ಥಾನ ದೊಡ್ಡ ದೇವಸ್ಥಾನವಾಗಿರುತ್ತದೆ. ಸದರಿ ದೇವಸ್ಥಾನಗಳು ಮುಜರಾಹಿ ಇಲಾಖೆಗೆ ಸೇರಿಲ್ಲ. ಕಳೆದ 6 ತಿಂಗಳಿನಿಂದ ನಮ್ಮ ತಂದೆಯ ಆರೋಗ್ಯ ಸ್ಥಿತಿ ಸರಿಯಿಲ್ಲ ಎಂದರೆ ಸರಿ. ಸದರಿ ದೇವಸ್ಥಾನದ ಕಮಿಟಿಯಲ್ಲಿ ನಂಜನಾಯ್ಕ ಎಂಬ ಅಧ್ಯಕ್ಷರು, ಈ ದಾವೆಯ ವಾದಿ ಅಶೋಕನಾಯ್ಕ, ಶಂಕರನಾಯ್ಕರವರು, ಕಾಮರಾಜನಾಯ್ಕ, ವಿನೋದಕುಮಾರ್,

ಶೇಖರನಾಯ್ಕ, ಚಂದ್ರನಾಯ್ಕ, ಮಲ್ಲಿಕಾರ್ಜುನ ನಾಯ್ಕ, ದಾಗಿಸ್ವಾಮಿ ನಾಯ್ಕ ಎನ್ನುವವರು ಇದ್ದಾರೆ. ಈ ದಾವೆಯ ವಾದಿ ಸದರಿ ದೇವಸ್ಥಾನದ ಕಮಿಟಿಯ ಸದಸ್ಯರು ಎಂದರೆ ಸರಿ. ಸದರಿ ದೇವಸ್ಥಾನದ ಕಮಿಟಿಯವರು ನಮಗೆ ಸಂಬಳವನ್ನು ಕೊಡುತ್ತಾರೆ ಎಂದರೆ ಸರಿ. ಆದ್ದರಿಂದ ವಾದಿ ನನ್ನನ್ನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಕರೆತಂದಿರುತ್ತಾರೆ ಎಂದರೆ ಸಾಕ್ಷಿ ವಾದಿಯ ಜಮೀನಿನ ಪಕ್ಕ ನಮ್ಮ ಜಮೀನು ಇರುವುದರಿಂದ ನಾನು ಸಾಕ್ಷನುಡಿಯಲು ಬಂದಿದ್ದೇನೆ ಎಂದು ನುಡಿಯುತ್ತಾರೆ.

ನಾನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳು ಸತ್ಯವಾಗಿದೆ. ದಾವಾಸ್ತಿಯ ಮಾಹಿತಿ ನನಗೆ ಬುದ್ದಿಬಂದಾಗಿನಿಂದ ಗೊತ್ತಿದೆ. ದಾವಾಸ್ತಿಯ ಸರ್ವೆ ನಂ 11/1 ಎಂದು ಇದ್ದು ಸದರಿ ಸರ್ವೆ ನಂ 11/1 ಪಿ2 ಎಂದು ಬದಲಾದ ಬಗ್ಗೆ ನನಗೆ ಗೊತ್ತಿದೆ. ದಾವಾಸ್ತಿ ಜಮೀನು ಮೂಲತಃ ಯಾರ ಹೆಸರಿಗೆ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸಾಗುವಳಿ ಚೀಟಿ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಸದರಿ ಮಂಜೂರಾತಿ ಬಗ್ಗೆ ನನಗೆ ಯಾವ ವಿಚಾರವು ಗೊತ್ತಿಲ್ಲ. ದಾವಾಸ್ತಿಯ ಪಹಣಿಯಲ್ಲಿ ಇಬ್ಬರ ಹೆಸರು ಈಗ ಚಾಲ್ತಿಯಲ್ಲಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ವಾದಿಯ ತಂದೆಯ ಹೆಸರನ್ನು ನಾನು 1994 ರ ಹಿಂದಿನ ಪಹಣಿಯಲ್ಲಿ ನೋಡಿರುತ್ತೇನೆ. ಪ್ರತಿವಾದಿಗಳು ವಾದಿಯ ತಂದೆಗೆ ದಾವಾಸ್ತಿಯನ್ನು ಕಾಳು ಗುತ್ತಿಗೆಗೆ ಮೌಖಿಕವಾಗಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 1990-91 ರ ಪಹಣಿಯಲ್ಲಿ ಕಾಲಂ ನಂ 12 ರಲ್ಲಿ ಲಚ್ಮನಾಯ್ಕರವರ ಹೆಸರು ಹೇಗೆ ಬಂತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾದಿಯ ಕುಟುಂಬಕ್ಕೆ ದಾವಾಸ್ತಿಯನ್ನು ವರ್ಗಾಯಿಸಿರುವ ಕುರಿತು ನಾನು ಯಾವುದೇ ದಾಖಲೆ ನೋಡಿಲ್ಲ. ನಿಪಿ-5 ರ ದಾಖಲೆ ಯಾವ ಜಮೀನಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ನಿಪಿ-11 ರಂತೆ ಆದ ಕ್ರಯಪತ್ರದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ದಾವಾಸ್ತಿ ಕುರಿತು ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣಕ್ಕಾಗಿ ಉಪವಿಭಾಗಾಧಿಕಾರಿಗಳು ಸ್ದಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ ಮಹಜರು ಮಾಡಿರುತ್ತಾರೆ. ಸದರಿ ಆರ್ ಐ ವಿ ಐ ವರದಿಯಲ್ಲಿ ವಾದಿ ದಾವಾಸ್ತಿ ಪ್ರತಿವಾದಿಗಳದ್ದೆ ಎಂದು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ಯಾರಿಗೆ ಮಂಜೂರಾತಿಯಾಗಿತ್ತೊ ಅವರ ವಾರಸುದಾರರೇ ದಾವಾಸ್ತಿಯನ್ನು ಸಾಗು ಮಾಡುತ್ತಿದ್ದಾರೆ, ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದವರೇ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಈ ದಾವೆಯ ವಾದಿ ಮತ್ತು 7 ನೇ ಪ್ರತಿವಾದಿ ಇಬ್ಬರು ಸಹ ದಾವಾಸ್ತಿಯನ್ನು ಹೇಗೆ ಹಂಚಿಕೊಂಡರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿ ಮೂಲತಃ ಯಾರೆಗ ಮಂಜೂರಾಯಿತು ಮತ್ತು ಅವರ ವಾರಸುದಾರರ ಬಗ್ಗೆ ನನಗೆ ಗೊತ್ತಿಲ್ಲ.

ನಾನು ಇತ್ತೀಚೆಗೆ ಬಂದು ನಮ್ಮ ಊರಿನಲ್ಲಿ ವಾಸಿಸಲು ಪ್ರಾರಂಭಿಸಿದ್ದರಿಂದ ನನಗೆ ದಾವಾಸ್ತಿಯ ಕುರಿತು ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ವಾರಸುದಾರರು

ಪ್ರತಿವಾದಿಗಳೇ ಹೊರತು ವಾದಿ ಅಲ್ಲ ಎಂದರೆ ಸಾಕ್ಷಿ ವಾದಿ ಮತ್ತು 7 ನೇಪ್ರತಿವಾದಿ ಇಬ್ಬರು ಸಹ ದಾವಾಸ್ತಿಯನ್ನು ಸಾಗುಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.